NP – 017

IV ಸೆಮಿಸ್ಟರ್ ಬಿ.ಎ. ಪರೀಕ್ಷೆ, ಆಗಸ್ಟ್/ಸೆಪ್ಟೆಂಬರ್ 2023
(NEP Scheme)
ಕನ್ನಡ
ಕಲಾ ಕನ್ನಡ - 4

Time : 2½ Hours Max. Marks : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಇನ್ನೂರು ಪದಗಳಿಗೆ ಮೀರದಂತೆ). (2×10=20)

1) 'ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು' ಪದ್ಯಭಾಗದ ಆಶಯವನ್ನು ವಿವರಿಸಿ.

2) 'ತುತ್ತಿನ ಮರ' ಕಥೆಯಲ್ಲಿ ನಡೆದ ಜಗಳದ ಸನ್ನಿವೇಶವನ್ನು ಕುರಿತು ಬರೆಯಿರಿ.

3) ಕಾಲ ಏಕಮುಖವಾಗಿ ಚಲಿಸುತ್ತದೆ ಎಂಬುದನ್ನು 'ಈ ಕ್ಷಣ ಎಲ್ಲಿದೆ ?' ಲೇಖನದ ಹಿನ್ನೆಲೆಯಲ್ಲಿ ಬರೆಯಿರಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ನೂರು ಪದಗಳಿಗೆ ಮೀರದಂತೆ). (4×5=20)

St. Francis de Sales College LIBRARY Hebbagodi, Bangalore

1) ಮೇರಿ ಕ್ಯೂರಿಯ ನಿಸ್ವಾರ್ಥ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

2) ಅಮೋಘಸಿದ್ಧನ ಜಾತ್ರೆಯ ವೈಶಿಷ್ಟ್ಯತೆಯೇನು ?

3) ಕವಿ ಕಾಲಪುರುಷನ ಸ್ಥಿತಿಯನ್ನು ಹೇಗೆ ವರ್ಣಿಸಿದ್ದಾನೆ ?

4) 'ತುತ್ತಿನ ಮರ' ಕಥೆಯಲ್ಲಿ ಮೂಡಿ ಬಂದಿರುವ ಮಳೆಯ ವರ್ಣನೆಯನ್ನು ಕುರಿತು ಬರೆಯಿರಿ.

5) ಸಾಹಿತ್ಯದಲ್ಲಿ ನಾಟಕದ ಸ್ಥಾನವೇನು ? ತಿಳಿಸಿ.

6) ಆಡಳಿತ ಭಾಷೆಯ ಲಕ್ಷಣಗಳಾವುವು ?

III. ಕೆಳಕಂಡ ಕಂಡಿಕೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿ. (1×4=4)

ಕಾಲ ಅತ್ಯಂತ ಶಕ್ತಿಯುತವಾದ ಸಂಗತಿಯೆಂದು ನಾನು ನಿಮಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಎಂತಹ ನಿರ್ಭಾವುಕರೂ ಸಹಾ ಕಾಲದ ವಿಷಯ ಬಂದಾಗ ತೀವ್ರ ಭಾವುಕರಾಗುವುದನ್ನು ನೀವು ಗಮನಿಸಿರಬೇಕು. ಅದೂ ಕಳೆದು ಹೋದ ಕಾಲದ ಮೇಲಂತೂ ಎಲ್ಲಿಲ್ಲದ ಪ್ರೀತಿ.

IV. ಒಂದು ಕಾಲ್ಪನಿಕ ಹೆಸರಿನಲ್ಲಿ ಅಕೌಂಟೆಂಟ್ ಹುದ್ದೆಗೆ ಅರ್ಜಿ ಹಾಗೂ ಅಭ್ಯರ್ಥನ ಪತ್ರ ತಯಾರಿಸಿ. (1×4=4)

P.T.O.

V. ಕೆಳಕಂಡ ಚಿತ್ರ ಗಮನಿಸಿ ಒಂದು ಕವಿತೆ ಅಥವಾ ಕಥೆ ಬರೆದು ಸೂಕ್ತ ಶೀರ್ಷಿಕೆ ನೀಡಿ (**80** ಪದಗಳಿಗೆ ಮೀರದಂತೆ). **(1×4=4)**



St. Francis de Sales College LIBRARY Hebbagodi, Bangalore

VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ, ಸೂಕ್ತ ಶೀರ್ಷಿಕೆ ನೀಡಿ. **(1×4=4)**

ಅಮೋಘಸಿದ್ಧ ಮೂವರು ಮಕ್ಕಳನ್ನು ಸಾಕಿದ್ದ. ಅವರಿಗೆ 'ಪುಣ್ಯದ ಮಕ್ಕಳು' ಎಂದು ಕರೆಯುತ್ತಾರೆ. ಆತನಿಗೆ ಮಕ್ಕಳಾಗಿರಲಿಲ್ಲ. ಅಮೋಘಸಿದ್ಧನ ಪತ್ನಿ ತನ್ನ ಪುಣ್ಯದ ಮಕ್ಕಳ ಮುಂದೆ ಬಂಜೆತನದ ನೋವನ್ನು ವ್ಯಕ್ತಪಡಿಸುತ್ತಾಳೆ. ಅವರು ಅಮೋಘಸಿದ್ಧನಿಗೆ ಈ ಕುರಿತು ತಿಳಿಸುತ್ತಾರೆ. ತದನಂತರ ನಾಲ್ಕು ಮಕ್ಕಳಾಗುತ್ತವೆ. ಅವರಿಗೆ 'ವರವಿನ ಮಕ್ಕಳು' ಎಂದು ಕರೆಯುತ್ತಾರೆ. ಅಮೋಘಸಿದ್ಧನ ಮೊದಲ ಪ್ರೀತಿ ಭಕ್ತರ ಮೇಲೆ, ನಂತರ ಪುಣ್ಯದ ಮಕ್ಕಳ ಮೇಲೆ. ತದನಂತರ ತನಗೆ ಹುಟ್ಟಿದ ಮಕ್ಕಳ ಮೇಲೆ !

VII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. (ಎಲ್ಲ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ) **(4×1=4)**

1) ಷಟ್ಪದಿ ಪ್ರಕಾರದಲ್ಲಿ ಕಾವ್ಯ ರಚಿಸಿದ ಕವಿ ಯಾರು ?

ಎ) ನಾಗವರ್ಮ ಬಿ) ಹರಿಹರ ಸಿ) ದುರ್ಗಸಿಂಹ ಡಿ) ರಾಘವಾಂಕ

2) 'ರೇಡಿಯಂ' ಕಂಡುಹಿಡಿದವರು ಯಾರು ?

ಎ) ಗೆಲಿಲಿಯೋ ಬಿ) ಕೋಪರ್ನಿಕಸ್ ಸಿ) ಮೇರಿ ಕ್ಯೂರಿ ಡಿ) ನ್ಯೂಟನ್

3) 'ಭಂಡಾರದ ಒಡೆಯ' ಎಂದು ಯಾರನ್ನು ಕರೆಯುತ್ತಿದ್ದರು ?

ಎ) ಬಸವಣ್ಣ ಬಿ) ಸಿದ್ಧರಾಮ ಸಿ) ಅಮೋಘಸಿದ್ಧ ಡಿ) ದಾಸಿಮಯ್ಯ

4) 'ತುತ್ತಿನ ಮರ' ವೆಂದು ಯಾವ ಮರವನ್ನು ಕರೆಯಲಾಗಿದೆ ?

ಎ) ಮಾವಿನಮರ ಬಿ) ಅತ್ತಿಮರ ಸಿ) ನೇರಳೆಮರ ಡಿ) ಹಲಸಿನಮರ